ಟೀಪಾಯಿಯ ಮೇಲಿದ್ದ ಲಕೋಟೆಯಲ್ಲಿ ಏನಿರಬಹುದು? ಧರಣೇಂದ್ರಯ್ಯನವರ ವಿಷಯದಲ್ಲಿ ನನ್ನ ಮೇಲೇನಾದರೂ ಕೇಸ್ ಹಾಕಿರಬಹುದೇ! ಹರಿದು ಹಾಕಿ ಬಿಡಲೇ ಎಂದೆಲ್ಲಾ ಯೋಚಿಸಿದೆನಾದರೂ ಸಹಜ ಕುತೂಹಲದಿಂದ ಲಕೋಟೆಯನ್ನು ಬಿಡಿಸಿದೆ. ಅದರಲ್ಲಿ ಒಂದು ಪತ್ರ ಮತ್ತು ಮೂವತ್ತು ಲಕ್ಷ ಮೊತ್ತಕ್ಕೆ ಒಂದು ಚೆಕ್ ಇತ್ತು. ಅದೂ ನನ್ನ ಹೆಸರಿಗೆ!

'...ಅಂತಿಮ ಸಮಯದಲ್ಲಿ ಮನೆಯಲ್ಲಿಟ್ಟುಕೊಂಡು ಆತಿಥ್ಯ ನೀಡಿ ಮೃತರ ಅಂತ್ಯ ಸಂಸ್ಕಾರವನ್ನೂ ನೆರವೇರಿಸಿದ ಸತೀಶಚಂದ್ರರಿಗೆ ತಮ್ಮ ಸ್ಥಿರ ಆಸ್ತಿಯ ಮಾರಾಟದ ನಂತರ ಬಂದ ಹಣದಲ್ಲಿ ಮೂವತ್ತು ಲಕ್ಷ ರೂಪಾಯಿಗಳನ್ನು ನೀಡಬೇಕೆಂದು ಧರಣೇಂದ್ರಯ್ಯನವರು ಅಪೇಕ್ಷಿಸಿರುತ್ತಾರೆ. ಅದರಂತೆ...'

ಕೈಕಾಲುಗಳು ಸಣ್ಣಗೆ ನಡುಗತೊಡಗಿದವು. ಆ ಪರಿಸ್ಥಿತಿಯಲ್ಲೂ "ಜ್ಯೋತೀ..." ಎಂದು ಕಿರುಚಿದೆ. "ಹೋಯ್ತು ಪಿಶಾಚಿ ಅಂದ್ರೆ ಬಂತು ಗವಾಕ್ಷೀಲಿ ಅನ್ನೋ ಹಾಗೆ ಇನ್ನೇನು ಸಮಸ್ಯೆ ತಂದ್ನೋ ಆ ಮನುಷ್ಯ" ಎನ್ನುತ್ತಾ ಅಮ್ಮನೂ ಕೂಗಾಡುತ್ತಾ ಬಂದರು. ಚೆಕ್‌ನ ಹಾಳೆಯನ್ನು ಅವರ ಮುಖಕ್ಕೆ ಹಿಡಿಯುತ್ತಾ, ಧರಣೇಂದ್ರಯ್ಯನವರು ನಮಗೆ ಮೂವತ್ತು ಲಕ್ಷ ದಾನ ಮಾಡಿರುವ ವಿಷಯ ತಿಳಿಸಿದೆ. ತೆರೆದ ಬಾಯಿ ಮುಚ್ಚದೆ ಇಬ್ಬರೂ ಎಷ್ಟೋ ಹೊತ್ತು ಹಾಗೇ ನಿಂತಿದ್ದರು.

"ಅನ್ಯಾಯವಾಗಿ ಆ ಹುಡುಗನನ್ನ ಬೈಯ್ದು ಹೊರಗಟ್ಟಿದಿರಲ್ಲಾ. ನಿಮ್ಮ ಅವಸರ ಬುದ್ಧಿಗೆ ಏನು ಮಾಡಬೇಕು" ಎಂದಳು ಜ್ಯೋತಿ.

ಲಕೋಟೆ ನೀಡಿ ಹೋದ ವ್ಯಕ್ತಿಯನ್ನು ಕರೆಯಲು ಹೊರಗೋಡಿದೆ. ಆತ ಎಲ್ಲೂ ಕಾಣಲಿಲ್ಲ. ಅವನಾಗಲೇ ಹೊರಟು ಹೋಗಿದ್ದ.

ಹರೀಶ್ ಸಗಾಯ್ ಅವರಿಗೆ ಫೋನ್ ಮಾಡಿದೆ. ಕರೆ ಸ್ವೀಕರಿಸಿ, "ಹೇಳಿ ಸತೀಶ್ ಅವರೆ. ಧರಣೇಂದ್ರಯ್ಯನವರ ಬಗ್ಗೆ ಏನಾದರೂ ಮಾಹಿತಿ ಬೇಕಿತ್ತಾ?" ಎಂದು ಕೇಳಿದರು.

"ಇಲ್ಲ... ಇಲ್ಲ. ಈಗ ತಾನೇ ನಿಮ್ಮ ಸಹಾಯಕ ಬಂದಿದ್ದರು. ನನ್ನ ಹೆಸರಿಗೆ ಒಂದು ಚೆಕ್ ಕೊಟ್ಟು ಹೋಗಿದ್ದಾರೆ. ಮೂವತ್ತು ಲಕ್ಷ ರೂಪಾಯಿ! ಯಾರ ಖಾತೆ, ಯಾರ ಸಹಿ ಒಂದೂ ಗೊತ್ತಾಗುತ್ತಿಲ್ಲ. ನಿಮ್ಮ ಪತ್ರ ಕೂಡ ಇದೆ..." ಎಂದ ನಾನು ಸ್ವಲ್ಪ ಉದ್ವೇಗಗೊಂಡಿದ್ದೆ ಎನಿಸುತ್ತೆ.

"ಓ... ಆ ವಿಷಯಾನಾ. ಅಷ್ಟೊಂದು ಗಾಬರಿಯಾಗಬೇಡಿ. ಧರಣೇಂದ್ರಯ್ಯನವರು ನನಗೇ ಪವರ್ ಆಫ್ ಅಟಾರ್ನಿ ಕೊಟ್ಟಿದ್ದಾರೆ. ಅವರ ಉಯಿಲಿನಲ್ಲಿ ಬರೆದಂತೆ ಹಣವನ್ನು ಹಂಚೋದಿಕ್ಕೆ" ಎಂದರು.

"ಅಲ್ಲ... ನಾನೇನು ಮಾಡಬೇಕು ಗೊತ್ತಾಗುತ್ತಿಲ್ಲ. ಈ ಹಣ ನನಗೆ ಅಂದರೆ, ಇಷ್ಟೊಂದು ಹಣ ನನ್ನ ಹೆಸರಿಗೆ!?..." ಉದ್ವೇಗದಿಂದ ನನ್ನ ಧ್ವನಿ ಇನ್ನೂ ನಡುಗುತ್ತಿತ್ತು. ಎದೆ ಬಡಿತ ಜೋರಾಗಿ ಕೇಳಿಸುತ್ತಿತ್ತು.

"ಹೌದು ನಿಮ್ಮ ಹೆಸರಿಗೇ ಕಳುಹಿಸಿದ್ದೇನೆ. ಇದು ಧರಣೇಂದ್ರಯ್ಯನವರ ಅಪೇಕ್ಷೆ ಸ್ವಾಮೀ. ಅವರನ್ನು ಆದರಿಸಿ ಸತ್ಕರಿಸಿದ ಪ್ರತಿ ಕುಟುಂಬಕ್ಕೂ ತಮ್ಮ ಆಸ್ತಿಯ ಸ್ವಲ್ಪ ಭಾಗವನ್ನು ದಾನ ಮಾಡುವಂತೆ ವಿಲ್‌ನಲ್ಲಿ ಬರೆದಿದ್ದಾರೆ. ತಮ್ಮ ಬದುಕಿನ ಕೊನೆಯ ಕಾಲದಲ್ಲಿ ಯಾರು ತಮ್ಮನ್ನು ನೋಡಿಕೊಳ್ಳುತ್ತಾರೋ ಅವರಿಗೆ ಈ ಮೂವತ್ತು ಲಕ್ಷ ಹಣವನ್ನು ನೀಡುವಂತೆ